ಪಿ.ಸಿ. ನಂಃ 135/2026

ಪಿ.ಡಬ್ಲ್ಯೂಃ 1

**ಮಾನ್ಯ ಸರ್ವೋಚ್ಛ ನ್ಯಾಯಾಲಯವು ಇಂಡಿಯನ್ ಬ್ಯಾಂಕ್ ಅಸೋಸಿಯನ್ ಕೇಸಿನಲ್ಲಿ ಮಾಡಿದ ಆದೇಶದಂತೆ ಸಾಕ್ಷಿಯ ಹೇಳಿಕೆಯ ಪ್ರಮಾಣ ಪತ್ರವನ್ನು ಸ್ವೀಕರಿಸಿ ಸಾಕ್ಷಿಯನ್ನು ಪಿ.ಡಬ್ಲ್ಯೂ –1 ಎಂದು ಪರಿಗಣಿಸಲಾಯಿತು.**

ದಿನಾಂಕಃ 09–06–2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ದೂರುದಾರರ ಸ್ವ–ಪ್ರಮಾಣೀಕೃತ ಹೇಳಿಕೆ ಪ್ರಮಾಣ ಪತ್ರ**

ನಾನು ನನ್ನ ಸ್ವ–ಪ್ರಮಾಣೀಕೃತ ಹೇಳಿಕೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ಸರಿಯಾಗಿರುತ್ತವೆ.

**ಮುಂದುವರೆದ ಸ್ವ–ಪ್ರಮಾಣೀಕೃತ ಹೇಳಿಕೆ ನ್ಯಾಯಾಲಯದಿಂದ.**

ಆರೋಪಿ ನನಗೆ ನೀಡಿದ ಚೆಕ್ಕನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ–1 ಎಂದು ಗುರುತಿಸಲಾಯಿತು. ಚೆಕ್ಕನ್ನು ಬಟವಡೆಗೆ ಹಾಕಲಾಗಿ ಬ್ಯಾಂಕಿನವರು ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ದೃಢೀಕರಿಸಿ ಜ್ಞಾಪನಾ ಪತ್ರವನ್ನು ನೀಡಿದ್ದು ಅದನ್ನು ನಿಪಿ–2 ಎಂದು ಗುರುತಿಸಲಾಯಿತು. ಚೆಕ್ಕು ಅಮಾನ್ಯವಾದ ನಂತರ ನನ್ನ ನ್ಯಾಯವಾದಿಗಳ ಮೂಲಕ ಆರೋಪಿಗೆ ನೋಟೀಸು ನೀಡಿದ್ದು ಅದರ ಕಚೇರಿಯ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ–3 ಎಂದು ಗುರುತಿಸಲಾಯಿತು. ನೋಟೀಸು ಆರೋಪಿಗೆ ಕಳುಹಿಸಿದ ಬಗ್ಗೆ ಅಂಚೆ ರಶೀದಿ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ–4 ಎಂದು ಗುರುತಿಸಲಾಯಿತು. ನೋಟೀಸು

ಆರೋಪಿಗೆ ಜಾರಿಯಾದ ಬಗ್ಗೆ ಅಂಚೆ ಸ್ವಿಕೃತಿ ಪತ್ರ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ–5 ಎಂದು ಗುರುತಿಸಲಾಯಿತು.

ಆರೋಪಿ ನಮ್ಮ ಬ್ಯಾಂಕಿಗೆ ಇಲ್ಲಿಯವರೆಗೂ ಚೆಕ್ಕಿನಲ್ಲಿ ನಮೂದಿಸಿದ ಹಣ ಕೊಟ್ಟಿರುವುದಿಲ್ಲ. ಆದ್ದರಿಂದ ಆರೋಪಿತನ ವಿರುದ್ಧ ಮಾನ್ಯ ನ್ಯಾಯಾಲಯದವರು ಸಂಜ್ಞೆಯತೆಯನ್ನು ತೆಗೆದುಕೊಂಡು ಅವರಿಗೆ ನ್ಯಾಯಾಲಯದಿಂದ ಸಮನ್ಸ ಹೊರಡಿಸಲು ಪ್ರಾರ್ಥಿಸುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.